**<u>ಮಧ್ಯಂತರ ಅರ್ಜಿ ನಂ.4 ರಿಂದ 6 ರ ಮೇಲೆ ಆದ ಆದೇಶದ ಮೇರೆಗೆ</u>**

**<u>ಸಾಕ್ಷಿಯನ್ನು ಇಂದು ದಿ.01.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ. AAH ವಕೀಲರಿಂದ</u>**

ನಾನು ಈ ಕೆಳಗಿನಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| **ಅ. ನಂ** | **ದಾಖಲೆಗಳ ವಿವರ** | **ನಿಶಾನೆ** |
|---|---|---|
| 1 | ದಿನಾಂಕ: 10.04.2015 ರ ತಿಕೋಟಾ ಗ್ರಾಮದ ಖರೀದಿ ಪತ್ರದ ದೃಢೀಕೃತ ನಕಲು | 20 |
| 2 | ದಿನಾಂಕ: 10.06.2016 ರ ತಿಕೋಟಾ ಗ್ರಾಮದ ಖರೀದಿ ಪತ್ರದ ದೃಢೀಕೃತ ನಕಲು | 21 |
| 3 | LAC No.2231/2020 ರ ತೀರ್ಪು | 22 |
| 4 | LAC No.2462/2022 ರ ಅವಾರ್ಡ | 23 |

ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ.63 ರಡಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಆದ್ದರಿಂದ, ಎಲ್ಲ ದಾಖಲೆಗಳನ್ನು ಪರಿಶೀಲಿಸಿ ನನ್ನ ಅರ್ಜಿಯನ್ನು ಪುರಸ್ಕರಿಸಲು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲು: ಎದುರುದಾರರ ಪರವಾಗಿ:</u>**

14) ನಿ.ಪಿ.20 ಮತ್ತು 21 ರ ಜಮೀನುಗಳು ತಿಕೋಟಾ ಬಸ ನಿಲ್ದಾಣಕೆಕೆ ಸಮೀಪದಲ್ಲಿವೆ ಎನ್ನುವುದು ನಿಜ. ನಿ.ಪಿ.20 ಮತ್ತು 21 ರಲ್ಲಿ ನಮೂದಿಸಲಾದ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಖರೀದಿಸಿರುತ್ತಾರೆ ಎನ್ನುವುದ ನಿಜ. ನಿ.ಪಿ.22 ಮತ್ತು 23 ರಲ್ಲಿ ನಮೂದಿಸಲಾದ ಜಮೀನುಗಳು ನಮ್ಮ ಜಮೀನಿನಿಂದ 2-3 ಕಿಮೀ ದೂರದಲ್ಲಿವೆ ಎನ್ನುವುದು ನಿಜ. ನಿ.ಪಿ.20 ರಿಂದ 23 ರಲ್ಲಿ ನಮೂದಿಸಲಾದ ಜಮೀನುಗಳಿಗೂ ಮತ್ತು ನಮ್ಮ ಜಮೀನಿಗೂ ಎಷ್ಟು ಅಂತರ ಇರುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ನಿಜ. ಸಾಮಾನ್ಯವಾಗಿ 3-5 ಗುಂಟೆ ಜಮೀನುಗಳಲ್ಲಿ ವ್ಯವಸಾಯ ಮಾಡಲು ಆಗುವುದಿಲ್ಲ ಎನ್ನುವುದು ನಿಜ. ನಿ.ಪಿ.20 ರಿಂದ 23 ದಾಖಲೆಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

ಎಲ್.ಎ.ಸಿ.ನಂ. 2506/2022
ಪಿ.ಡಬ್ಲ್ಯೂ: 01

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.